# ಒಡವೆ-ವಸ್ತ್ರಗಳ ಕಾರುಬಾರು

ಪ್ರತಿಷ್ಠಿತ ಒಡವೆ ಮಳಿಗೆಗಳು ವಧು–ವರರಿಗೆ ಅಷ್ಟೇ ಅಲ್ಲದೆ ಅದ್ದೂರಿ ಮದುವೆಯ ಭಾಗವಾಗುವ ಅಪೇಕ್ಷಿತರೆಲ್ಲರಿಗೂ ತಮ್ಮಿಷ್ಟದ ವಿನ್ಯಾಸದ ಬಂಗಾರ–ವಜ್ರದ ಒಡವೆಗಳನ್ನು ಮಾಡಿಕೊಡಲು ನಾ ಮುಂದು ತಾ ಮುಂದು ಎನ್ನುತ್ತವೆ. ವಸ್ತ್ರಗಳದ್ದಂತೂ ಇನ್ನೊಂದು ಮಹಾ ಕಾರುಬಾರು. ವಿನ್ಯಾಸಗೊಳಿಸಿವ ವಿಶೇಷ ಉಡುಪುಗಳಿಂದ ಹಿಡಿದು ಆಯಾ ಆಚರಣೆಗೆ ತಕ್ಕಂತಹ ಬಣ್ಣಗಳ ಆಯ್ಕೆಯನ್ನೂ ವಸ್ತ್ರ ಮಾರಾಟ ಮಳಿಗೆಗಳು ನೀಡುತ್ತಿವೆ. ಈ ವಿಷಯದಲ್ಲಿ ಇದಮಿತ್ಥಂ ಎಂದು ಒಂದು ಕಂಪನಿಯ ಹೆಸರು ಹೇಳುವುದು ಕಷ್ಟ.

ಕೇಶವಿನ್ಯಾಸ ಹಾಗೂ ಮೇಕ್–ಓವರ್ ಭರಾಟೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಬ್ಯೂಟಿಷಿಯನ್‌ಗಳ ದಂಡೇ ಮದುವೆ ಮನೆಗೆ ಬಂದು, ಪಟಪಟನೆ ಮೇಕಪ್ ಹಾಗೂ ಮೇಕ್‌ಓವರ್ ಮಾಡುವುದೀಗ ಸಹಜ. ವಧುವಿನ ಅಲಂಕಾರಕ್ಕೆ ಇಷ್ಟು, ವಧು–ವರನ ಅಮ್ಮಂದಿರ ಅಲಂಕಾರಕ್ಕೆ ಇಷ್ಟು, ಉಳಿದವರ ಮೇಕಪ್‌ಗೆ ಇಷ್ಟು ಎಂದು ಪ್ರತ್ಯೇಕ ಶುಲ್ಕದ ಪ್ಯಾಕೇಜ್ ಇರುತ್ತದೆ. ಸಂಭ್ರಮದ ಹೊಳೆಗೆ ಹೀಗೆ ಖರ್ಚಿನ ನೀರು ಸೇರುತ್ತಲೇ ಹೋಗುತ್ತದೆ.



ನೃತ್ಯಾಭ್ಯಾಸವನ್ನು ಕೋರ್ಟ್ ಮೊಗಸಾಲೆಯಲ್ಲೇ ನಡೆಸುವ ತಮಾಷೆಯ ಸನ್ನಿವೇಶವೊಂದು ಆ ಸಿನಿಮಾದಲ್ಲಿ ಇದೆ. ಸಮಾಜದ ಪ್ರಮುಖ ಹುದ್ದೆಯಲ್ಲಿ ಇರುವ ವ್ಯಕ್ತಿ ಕೂಡ ತಮ್ಮ ಮಗಳ ಮದುವೆಯಲ್ಲಿ ನೃತ್ಯ ಮಾಡಲು ಎಷ್ಟು ತವಕದಲ್ಲಿ ಇರುತ್ತಾರೆ ಎನ್ನುವ ಈ ಸನ್ನಿವೇಶವು ಹೊಸ ಕಾಲದ ಮದುವೆ ಭರಾಟೆಗೆ ಕನ್ನಡಿ ಹಿಡಿಯುತ್ತದೆ.

## ವಿವಾಹದ ಸಿಕ್ಕುಗಳು...

ಇವುಗಳ ಮಾತು ಒತ್ತಟ್ಟಿಗಿರಲಿ. ಈಗ ಮತ್ತೆ ಮದುವೆ ಖರ್ಚಿನ ಬಾಬತ್ತಿನ ವಿಷಯಕ್ಕೇ ಬರೋಣ. ಬೆಂಗಳೂರು ಉಳಿದ ಮಹಾನಗರಗಳಿಗಿಂತ ಮದುವೆಗೆಂದು ಖರ್ಚು ಮಾಡುವುದು ಕಡಿಮೆ ಎಂದು ನಾವು ಬೀಗುವ ಹಾಗೇನೂ ಇಲ್ಲ. ಅದು ಅದ್ದೂರಿ ಮದುವೆಗಳಿಗೆ ಸಂಬಂಧಿಸಿದ ವಿಷಯವಾಯಿತು. ಹೆಣ್ಣು ಹೆತ್ತವರು ತಮ್ಮ ಮಗಳನ್ನು ಒಳ್ಳೆಯ ಮನೆಗೆ ಕೊಟ್ಟು ಮದುವೆ ಮಾಡಬೇಕು ಎನ್ನುವ ಭಾವ ಇವತ್ತಿಗೂ ಹಾಗೆಯೇ ಇದೆ. ಅದೊಂದು ಜವಾಬ್ದಾರಿ ಎಂಬ ಧೋರಣೆಯಲ್ಲಿ ಮಧ್ಯಮ ವರ್ಗ ಹಾಗೂ ಅದಕ್ಕಿಂತ ಕಡಿಮೆ ಮಟ್ಟದಲ್ಲಿರುವ ಅನೇಕರು ಪಡಿಪಾಟಲು ಪಡುತ್ತಾರೆ.



2017ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದ್ದೂರಿ ಮದುವೆಗಳ ಹಿನ್ನೆಲೆಯಲ್ಲಿ ನಮ್ಮ ಸಮಾಜ ಸಾಗುತ್ತಿರುವ ದಿಕ್ಕಿನ ಕುರಿತು ವಿಷಾದದಿಂದ ಮಾತನಾಡಿದ್ದರು. ಅದರ ಸಾರಾಂಶ ಹೀಗಿತ್ತು: 'ಇತ್ತೀಚೆಗೆ ಹೋಗಿಬಂದ ಎಷ್ಟೋ ಮದುವೆಗಳಲ್ಲಿ ಹಣವನ್ನು ನೀರಿನಂತೆ ಖರ್ಚು ಮಾಡಿರುವುದನ್ನು ನೋಡಿದ್ದೇನೆ. ಜನರು ಮಗಳ ಮದುವೆ ಮಾಡಬೇಕೆಂದು ತಮ್ಮ ಆಸ್ತಿ–ಪಾಸ್ತಿ ಮಾರಾಟ ಮಾಡುವುದು, ಸಾಲದ ಸುಳಿಗೆ ಸಿಲುಕುವುದನ್ನು ಕಂಡು ದಂಗಾಗಿದ್ದೇನೆ. ಸರಳವಾಗಿ, ಸಾಮೂಹಿಕವಾಗಿ ವಿವಾಹಗಳು ನಡೆಯುವುದು ಹೆಚ್ಚಾಗಬೇಕು.' ಧಾರವಾಡದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಭೇಟಿ ನೀಡಿ ಅವರು ಆ ರೀತಿ ಮಾತನಾಡಿದ್ದರು.

2020ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರದಲ್ಲಿ 103 ಜೋಡಿಗಳ ಮದುವೆ ಸಮಾರಂಭ ನಡೆದಿತ್ತು. ಬಾಗೇಪಲ್ಲಿ ಬಳಿಯ ಹಳ್ಳಿಯಲ್ಲಿ ನಡೆದ ಆ ಮದುವೆಯಲ್ಲಿ ಎಲ್ಲ ಜೋಡಿಗೂ ಒಂದೊಂದು ಹಸುವನ್ನು ಉಡುಗೊರೆಯಾಗಿ ಕೊಟ್ಟಿದ್ದರು.

ಆಗ ಶಾಸಕರಾಗಿದ್ದ ಎಸ್. ಎನ್. ಸುಬ್ಬಾರೆಡ್ಡಿ ಅವರು ಆ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಿದ್ದ ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. 'ಮದುವೆ ಮಾಡಿಸುವುದು ಸಹಜ. ಸಾಮೂಹಿಕ ಮದುವೆಗಳು ಜೋಡಿಗಳನ್ನು ಒಂದು ಮಾಡುತ್ತವೆ ಎನ್ನುವುದೂ ನಿಜ. ಆದರೆ, ಅಂತಹ ಮದುವೆ ಆಗಲು ಮುಂದೆ ಬರುವವರಲ್ಲಿ ಕೂಲಿ ಕಾರ್ಮಿಕರು ಹೆಚ್ಚಾಗಿರುತ್ತಾರೆ. ಅವರಿಗೆ ಸ್ವತಂತ್ರವಾಗಿ ಮದುವೆಗೆ ಖರ್ಚು ಮಾಡುವಷ್ಟು ಸ್ಥಿತಿವಂತಿಕೆ ಇರುವುದಿಲ್ಲ. ಹೀಗಾಗಿ ಮದುವೆಯ ನಂತರವೂ ಮನೆಯ ಖರ್ಚು ತೂಗಿಸಿಕೊಂಡು ಹೋಗಲು ಹಸುವನ್ನು ಉಡುಗೊರೆಯಾಗಿ ನೀಡುವ ನಿರ್ಧಾರ ಮಾಡಿದ್ದೆವು. ಹಾಲನ್ನು ಡೇರಿಗೆ ಮಾರಾಟ ಮಾಡುವುದರಿಂದ ಒಂದು ಸಂಸಾರ ತೂಗಿಸಿಕೊಂಡು ಹೋಗಬಹುದು' ಎಂದು ಅವರು ಆಗ ಮಾರ್ಮಿಕವಾಗಿ ಹೇಳಿದ್ದರು. ಆ ದಿನ ಮದುವೆಯಾದ ಜೋಡಿಗಳಿಗೆಲ್ಲ ಹಸುಗಳು ಉಡುಗೊರೆಯ ರೂಪದಲ್ಲಿ ಸಿಕ್ಕಾಗ ಪರಮಾಶ್ಚರ್ಯವಾಗಿತ್ತು. ಎಷ್ಟೋ ಜೋಡಿ ಅಂಥದೊಂದು ಉಡುಗೊರೆ ಸಿಗಬಹುದು ಎನ್ನುವುದೂ ಗೊತ್ತಿರಲಿಲ್ಲ ಎಂದು ಹೇಳಿಕೊಂಡಿದ್ದರು.



ರಣಬಾಲಿ ಸಿನಿಮಾ ಮಾದರಿಯ ಫೋಟೊಶೂಟ್‌ನಲ್ಲಿ ನವಜೋಡಿ.
ಚಿತ್ರಕೃಪೆ: ಸ್ಟೋರೀಸ್ ಬೈ ಆರ್‌ಜಿ

ಹೊಸಕಾಲದಲ್ಲಿ ಸರಳ ಮದುವೆ ಎನ್ನುವುದು ಆಚರಣೆಗೆ ಮಾತ್ರ ಸೀಮಿತವಾಗಿರುವ ಉದಾಹರಣೆಗಳೂ ಇವೆ. ಮಂತ್ರ ಮಾಂಗಲ್ಯ ಆದ ನಂತರ ಐದುನೂರು, ಸಾವಿರ ಜನರಿಗೆ ಊಟ ಹಾಕಿಸುವ ಉಸಾಬರಿಗೆ ಬೆನ್ನು ಮಾಡಲಾಗದ ಎಷ್ಟೋ ಜನರ ಉದಾಹರಣೆಗಳು ನಮ್ಮ ಎದುರಲ್ಲಿವೆ. ಸರ್ಕಾರಿ ನೌಕರಿಯಲ್ಲಿ ಮೂವತ್ತು ವರ್ಷ ಸೇವೆ ಸಲ್ಲಿಸಿ ನಿವೃತ್ತರಾದವರು ಬೆಂಗಳೂರಿನಲ್ಲಿ ಒಂದು ಸ್ವಂತ ಸೂರು ಕಟ್ಟಿಕೊಂಡಿರುತ್ತಾರೋ ಇಲ್ಲವೋ, ಮಗಳ ಮದುವೆಗೆ ಅರ್ಧ ಕೋಟಿ ಖರ್ಚು ಮಾಡಲು ತಮ್ಮ ಉಳಿತಾಯದ ಹಣವನ್ನೆಲ್ಲ ವಿನಿಯೋಗಿಸಲು ಸಿದ್ಧವಿರುತ್ತಾರೆ.

ಒಟ್ಟಿನಲ್ಲಿ, 'ಮದುವೆ ಮಾಡಿ ನೋಡಲೇಬೇಕಾದ ಕಾಲ ಇದು' ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಪ್ರತಿಕ್ರಿಯಿಸಿ: feedback@sudha.co.in